## ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ

ಬನವಾಸಿ ರಸ್ತೆ, ಶಿರಸಿ

## ನಾಟಿ ಯಂತ್ರದಿಂದ ಭತ್ತದ ನಾಟಿ ಮಾಡುವುದರಿಂದ ಆಗುವ ಅನುಕೂಲಗಳು

| ಕೈಯಿಂದ ನಾಟಿ ಮಾಡುವುದರಿಂದ | ಯಂತ್ರದಿಂದ ನಾಟಿ ಮಾಡುವುದರಿಂದ |
|---|---|
| ಒಂದು ಎಕರೆಗೆ 30 ಕೆ.ಜಿ. ಬಿತ್ತನೆ ಬೀಜ ಬೇಕಾಗುತ್ತದೆ | ಒಂದು ಎಕರೆಗೆ 15 ರಿಂದ 20 ಕೆ.ಜಿ. ಬಿತ್ತನೆ ಬೀಜ ಬೇಕಾಗುತ್ತದೆ. |
| ನಾಟಿಗೆ 30–35 ದಿನದ ಪೈರುಗಳನ್ನು ಬಳಸಲಾಗುತ್ತದೆ | ನಾಟಿಗೆ 16–18 ದಿನದ ಪೈರುಗಳನ್ನು ಬಳಸಲಾಗುತ್ತದೆ. |
| ಒಂದು ಎಕರೆ ನಾಟಿ ಮಾಡಲು 20–25 ಆಳುಗಳು ಬೇಕಾಗುತ್ತದೆ | 5ಜನ ಆಳುಗಳಿಂದ ಒಂದು ದಿನಕ್ಕೆ 3–4 ಎಕರೆ ನಾಟಿ ಮಾಡಬಹುದು |
| ಆಳುಗಳಿಗೆ ಶ್ರಮದಾಯಕ ಕೆಲಸವಾಗುತ್ತದೆ. | ಕಡಿಮೆ ಶ್ರಮದಲ್ಲಿ ಕೆಲಸ ಮಾಡಬಹುದು |
| ಪೈರಿನಿಂದ ಪೈರಿಗೆ ಮತ್ತು ಸಾಲಿನಿಂದ ಸಾಲಿಗೆ ನಿರ್ಧಿಷ್ಟ ಅಂತರ ಇರುವುದಿಲ್ಲಾ | ಪೈರಿನಿಂದ ಪೈರಿಗೆ ಮತ್ತು ಸಾಲಿನಿಂದ ಸಾಲಿಗೆ ನಿರ್ಧಿಷ್ಟ ಅಂತರ ಇರುತ್ತದೆ. |
| ಕೈಯಲ್ಲಿ ನಾಟಿ ಮಾಡಿದ ಪೈರಿನ ಆಳವು ಸಮಾನಾಂತರವಿರುವುದಿಲ್ಲ . | ಯಂತ್ರದಿಂದ ನಾಟಿ ಮಾಡಿದ ಪೈರಿನ ಆಳವು ಸಮಾನವಾಗಿರುತ್ತದೆ. |
| ನಾಟಿ ಆಳುಗಳ ಕೊರತೆಯಿಂದ ಸಕಾಲದಲ್ಲಿ ನಾಟಿ ಮಾಡಲಾಗುವುದಿಲ್ಲ. ಇದರಿಂದ ಇಳುವರಿ ಕಡಿಮೆಯಾಗುತ್ತದೆ. | ಯಂತ್ರದದಿಂದ ಸಕಾಲದಲ್ಲಿ ಎಳೆ ಪೈರನ್ನು ನಾಟಿ ಮಾಡಲು ಸಾಧ್ಯವಾಗುವುದರಿಂದ ಹೆಚ್ಚು ಇಳುವರಿ ಪಡೆಯಬಹುದು |
| ಕಳೆ ತೆಗೆಯಲು ಆಳುಗಳೇ ಬೇಕಾಗುತ್ತದೆ | ಯಂತ್ರಗಳ (ಕೋನೋ ವೀಡರ್) ಸಹಾಯದಿಂದ ಸರಾಗವಾಗಿ ಕಳೆ ತೆಗೆಯಬಹುದು. |
| ಒಂದು ಎಕರೆ ನಾಟಿಮಾಡಲು ರೂ 4000–5000 ಖರ್ಚಾಗುತ್ತದೆ | ಒಂದು ಎಕರೆ ನಾಟಿಮಾಡಲು ರೂ 1200–1500 ಗಳಿಗಿಂತಲೂ ಕಡಿಮೆ ಖರ್ಚಾಗುತ್ತದೆ. |
| ಸಮಯ, ಶ್ರಮ ಮತ್ತು ಖರ್ಚು ಜಾಸ್ತಿ | ಸಮಯ, ಶ್ರಮ ಮತ್ತು ಖರ್ಚು ಉಳಿತಾಯ |




